# ದೇವಯಾನ

ಭಾರತಸರ್ಕಾರದ ಧ್ಯೇಯವಾಕ್ಯ 'ಸತ್ಯಮೇವ ಜಯತೆ'. ಇದು ಮುಂಡಕೋಪನಿಷತ್ತಿನಲ್ಲಿ ಬರುವ ಮಾತು. 'ಸತ್ಯವೇ ಜಯಿಸುತ್ತದೆ' ಎಂಬುದು ಇದರ ಅರ್ಥ. ಬಲು ಹಿಂದಿನಿಂದಲೂ 'ಸತ್ಯ' ಎಂದರೇನು? ಅದರ ಆಶಯವೇನು? ನಾವು ಸತ್ಯವನ್ನು ತಿಳಿಯುವ ಬಗೆ ಹೇಗೆ? ಇಂಥ ಪ್ರಶ್ನೆಗಳಿಗೆ ಉಪನಿಷತ್ತುಗಳ ಕಾಲದಿಂದಲೂ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿತ್ತು. 'ಸತ್ಯವೆಂಬುದೇ ಹರನು; ಹರನೆಂಬುದೇ ಸತ್ಯ' ಎಂದು ರಾಘವಾಂಕನು ಹೇಳಿದ್ದುಂಟು. 'ಸತ್ಯವೇ ಜಯವೆಂಬ ದಿವ್ಯಮಂತ್ರ' ಎಂದು ಪುರಂದರದಾಸರು ಹಾಡಿದ್ದಾರೆ! ಈ ಎಲ್ಲಕ್ಕೂ ಮುಂಡಕೋಪಷತ್ತಿನಲ್ಲಿ ಬರುವ ಮಾತೇ ಕೀಲಕವಾಗಿದೆ. ಈ ಮಂತ್ರದ ಪೂರ್ಣಪಾಠ ಹೀಗಿದೆ: ಸತ್ಯಮೇವ ಜಯತೇ ನಾನೃತಂ| ಸತ್ಯೇನ ಪಂಥಾ ವಿತತೋ ದೇವಯಾನಃ| ಯೇನಾಕ್ರಮಂತ್ಯೃಷಯೋಹ್ಯಾಪ್ತಕಾಮಾ| ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್ (3.1.6). ಈ ಮಂತ್ರದ ಇಷ್ಟು ಅರ್ಥ: 'ಸತ್ಯಮಾತ್ರ ಜಯಿಸುತ್ತದೆ, ಅನೃತ ಅಲ್ಲ. ಸತ್ಯದ ಆ ಪರಮಗುರಿ ಇರುವೆಡೆಗೆ ಆಪ್ತಕಾಮರಾದ ಋಷಿಗಳು ಯಾವ ಮಾರ್ಗದಿಂದ ಹೋಗುವರೋ ಆ ದೇವಯಾನವೆಂಬ ಪಥವು ಸತ್ಯದಿಂದ ಕೂಡಿದೆ'.

ರಾಜಾ ಹರಿಶ್ಚಂದ್ರ ಸತ್ಯದ ನೆಲೆಗಾಗಿಯೇ ಕೊನೆಯವರೆಗೂ ಹೋರಾಡಿದ. ಸತ್ಯ ಎಂಬ ಮಾತು ಬಂದಾಗ ಹರಿಶ್ಚಂದ್ರ ನಮ್ಮ ಕಣ್ಣಮುಂದೆ ಬರುತ್ತಾನೆ. ಯಾರು ಸತ್ಯದ ದಾರಿಯನ್ನು ಹಿಡಿಯುತ್ತಾರೋ ಅವರು ಕೊನೆಗೆ ಗೆಲ್ಲುತ್ತಾರೆ. ಅವರು ಮೊದಮೊದಲು ಕಷ್ಟಪಡುವುದೇನೊ ಉಂಟು. ಆದರೆ, ಇದು ಪರೀಕ್ಷೆಗೆ ಬರುವುದೆಂದು ಸಾಧಕರು ತಿಳಿಯಬೇಕು. ಯಾರು ಕಠಿಣವಾದ ಪರೀಕ್ಷೆಯಲ್ಲಿ ಎದೆಯೊಡ್ಡಿ ನಿಲ್ಲುತ್ತಾರೋ ಅವರಿಗೆ ಜಯ ದೊರಕುತ್ತದೆ. 'ಯತೋ ಧರ್ಮಃ ತತೋ ಜಯಃ' ಎಂಬ ಮಾತನ್ನು ಒಮ್ಮೆ ನೆನಪಿಸಿಕೊಳ್ಳಬಹುದು. ಹೀಗೆ ಯಾರು ಧೈರ್ಯವಾಗಿ ನಿಲ್ಲುವರೋ ಅವರ ಮುಂದೆ ಅನೃತ ಗೆಲ್ಲುವುದಿಲ್ಲ. ಸತ್ಯವನ್ನು ಯಾರೂ ಮುಚ್ಚಿಡಲಾರರಷ್ಟೆ. ಅದು ಒಂದಲ್ಲ ಒಂದು ದಿನ ಬಯಲಾಗುತ್ತದೆ. ಇದು ಲೌಕಿಕದಲ್ಲಿ ಎಷ್ಟು ಸತ್ಯವೋ ಪರಮಾರ್ಥದ ವಿಷಯದಲ್ಲೂ ಸತ್ಯ. ನಿಜದ ನೆಲೆಯನ್ನು ಅರಸುವವರು ಪರಮಸತ್ಯದ ನೆಲೆಯನ್ನು ಹುಡುಕಿಕೊಂಡು ಹೋಗುತ್ತಾರೆ. ಇದು ಪರಮಸತ್ಯದ ಹಾದಿಯನ್ನು ಅರಸುವ ವಿಧಾನ. ಯಾರು ಅನೃತಪಥವನ್ನು ಹಿಡಿಯುವರೋ ಅವರು ತಾತ್ಕಾಲಿಕ ಸಂತೋಷವನ್ನು ಮಾತ್ರ ಪಡೆಯುತ್ತಾರೆ. ಮೊದಮೊದಲು ಸ್ವಲ್ಪ ಸುಖವನ್ನು ಪಡೆಯಬಹುದು ಅಷ್ಟೆ. ಆದರೆ, ಅದು ಪರಮಸುಖವಲ್ಲ. ಸಾಧಕರಿಗೆ, ಸತ್ಯದ ಪರಮಗುರಿಯೇ ಗಂತವ್ಯ. ಅವರಿಗೆ ಪರಬ್ರಹ್ಮವೊಂದೇ ಸತ್ಯ. ಅವರು ಆ ಗುರಿಯನ್ನು ತಲುಪಲು ಪ್ರಯತ್ನಿಸುತ್ತಾರೆ. ಮಾನವ ಬಾಳಿನ ಗುರಿ ಏನು? ಈ ಪ್ರಶ್ನೆಗೆ ಈ ಮಂತ್ರದಲ್ಲಿ ಉತ್ತರವುಂಟು. ನಾವು ಜನನ–ಮರಣಗಳಿಂದ ಸುಖ–ದುಃಖಗಳಿಂದ ಬಿಡುಗಡೆ ಪಡೆಯಬೇಕಷ್ಟೆ. ಇಂಥ ದ್ವಂದ್ವಗಳಿಂದ ಮೊದಲು ಪಾರಾಗಬೇಕು.

ಸತ್ಯದ ಹಾದಿಯನ್ನು ಹಿಡಿಯುವುದು ಅಷ್ಟು ಸುಲಭವಲ್ಲ. ಮಹಾತ್ಮ ಗಾಂಧೀಜಿ ಅವರು ಮೊದಮೊದಲು 'ದೇವರೇ ಸತ್ಯ' ಎಂಬ ಆಶಯವನ್ನು ಬಹುಕಾಲ ಹಿಡಿದುಕೊಂಡಿದ್ದರು. ಅನಂತರ ಸತ್ಯದ ಹಾದಿ ನಿಚ್ಚಳವಾಗುವುದಕ್ಕೆ ತೊಡಗಿದಾಗ, ಅನುಭವವು ದಾರಿ ತೋರಿಸಲು ಪ್ರಾರಂಭಿಸಿತು. ಆಗ 'ಸತ್ಯವೇ ದೇವರು' ಎಂಬ ನಿರ್ಣಯಕ್ಕೆ ಬಂದರು. ಪ್ರಾಚೀನ ಋಷಿಗಳು ಆಪ್ತಕಾಮರು. ಅವರು ಈ ಮಾರ್ಗದಲ್ಲಿಯೇ ಹೋಗುತ್ತಾರೆ. ಅಂಥವರು ತಮ್ಮ ಇಂದ್ರಿಯ ಮತ್ತು ಮನಸ್ಸನ್ನು ಗೆದ್ದಿರಬೇಕಾಗುತ್ತದೆ. ಈ ಕಾಮನೆಯನ್ನು ಯಾರು ಬಿಡುವರೋ ಅವರೇ ಆಪ್ತಕಾಮರು. ಈ ಕಾಮನೆಗೆ ಅಂತ್ಯವಿಲ್ಲವೆಂದು ಕಾಮನೆಯನ್ನೆ ಅವರು ಬಿಟ್ಟಿರುತ್ತಾರೆ. ಕಾಮನೆಯ ಹಸಿ ಒಳಗೆ ಇರುವಾಗ ಬಯಕೆಗಳೆಂಬ ಚಿಗುರುಗಳು ಒಳಗೆ ಹುಟ್ಟಿಕೊಳ್ಳುತ್ತಿರುತ್ತವೆ. ಕಾಮನೆಯ ಭಾರವನ್ನು ಯಾರು ಹೊತ್ತುಕೊಂಡು ಇರುವರೋ ಅವರು ಸತ್ಯದ ಗಿರಿಶಿಖರವನ್ನು ಎಂದಿಗೂ ಏರಲಾರರು.

ನಮ್ಮದು ಎರಡು ಬಗೆಯ ಯಾನ. ಒಂದು ಪಿತೃಯಾನ, ಎರಡನೆಯದು ದೇವಯಾನ. ಪಿತೃಗಳಿರುವ ಲೋಕಕ್ಕೆ ಹೋಗಿ, ಪುನಃ ಈ ಪ್ರಪಂಚಕ್ಕೆ ಹಿಂತಿರುಗಿದರೆ ಅದು ಪಿತೃಯಾನ. ಇದು ಬೇಸಿಗೆಯಲ್ಲಿ ಊಟಿಗೆ ಹೋಗಿಬಂದಂತೆ. ಆದರೆ, 'ದೇವಯಾನ' ಇದಕ್ಕಿಂತ ಬೇರೆಯಾದುದು. ದೇವಯಾನದಲ್ಲಿ ಯಾರು ಸಾಗುತ್ತಾರೋ ಅವರು ಮರಳಿ ಹಿಂತಿರುಗುವುದಿಲ್ಲ. ನಾವು ಕಾಮನೆಯಲ್ಲೇ ಬದುಕುವವರು. ಅದು ನೀಗಿದಾಗ ಮಾತ್ರ ದೇವಯಾನ ನಮಗೆ ತೆರೆದುಕೊಳ್ಳುತ್ತದೆ. ನಮ್ಮ ಅರಿವು ಅದರತ್ತ ಹೋಗಬೇಕಾಗುತ್ತದೆ. ಮನುಷ್ಯ ತನ್ನ ಬದುಕಿನಲ್ಲಿ ಯಾವಯಾವುದೋ ದಾರಿಗಳನ್ನು ಹಿಡಿದು ವಿಫಲನಾಗುತ್ತಾನೆ, ಬಳಲುತ್ತಾನೆ. ಕುವೆಂಪು 'ಬೆರಳ್‌ಗೆ ಕೊರಳ್' ನಾಟಕದಲ್ಲಿ 'ಬಟ್ಟೆಯಿಲ್ಲದೆಡೆ ಬಟ್ಟೆಯನ್ ಅರಸುತಿರ್ಪಯ್' ಎಂದು ಹೇಳುವ ಮಾತನ್ನು ಪ್ರಕೃತ ಸಂದರ್ಭಕ್ಕೂ ಅನ್ವಯಿಸಿಕೊಳ್ಳಬಹುದು. ನಾವು ಸರಿಯಾದ ದಾರಿಯನ್ನು ಹಿಡಿಯುವ ಬದಲು 'ವಕ್ರದಾರಿ'ಯ ಆಮಿಷಕ್ಕೆ ಬಲಿಯಾಗುತ್ತಿರುತ್ತೇವೆ. 'ದೇವಯಾನ'ದ ಮಾರ್ಗ ಅಷ್ಟು ಸುಲಭವಲ್ಲವೇನೊ ನಿಜ. ಅಲ್ಲಿಗೆ ಹೋಗಬೇಕಾದರೆ ಅವನು ಶುದ್ಧ ಸತ್ಯವಂತನಾಗಿಯೇ ಇರಬೇಕು. ಅವನಲ್ಲಿ ಋಜುತ್ವ ಇರಬೇಕು. ಪರಮಸತ್ಯವನ್ನು ತಿಳಿದುಕೊಳ್ಳುವ ಗಾಢವಾದ ಆಸಕ್ತಿಯೂ ಇರಬೇಕು. ಅದಕ್ಕಾಗಿ ಎಂಥ ಕಷ್ಟವನ್ನಾದರೂ ಅನುಭವಿಸಲು ಸಿದ್ಧನಾಗಿರಬೇಕು! ಇಂದ್ರಿಯ ಸುಖವನ್ನು ಮೆಲ್ಲುತ್ತ ಸತ್ಯದ ಹಾದಿಯಲ್ಲಿ ನಡೆಯಲು ಎಂದಿಗಾದರೂ ಸಾಧ್ಯವೇ? ಮಹಾತ್ಮಗಾಂಧೀಜಿ ಅವರು ಎಲ್ಲಾ ಬಗೆಯ ಕಾಮನೆಗಳನ್ನು ತೊರೆದು ಸತ್ಯದ ನೆಲೆ ತಿಳಿಯುವುದಕ್ಕಾಗಿ ದಾಪುಗಾಲು ಹಾಕಿದರು. ಭಾರತದ ಚರಿತ್ರೆಯ ಪುಟದಲ್ಲಿ ಸತ್ಯದ ಹಾದಿಯನ್ನು ಹಿಡಿದವರು ಎಷ್ಟೋಜನರಿದ್ದಾರೆ. ಅಂಥವರ ಆದರ್ಶದ ನೆಲೆಯನ್ನು ನಾವು ತಿಳಿದು ತಿಳಿಯಾಗಬೇಕಾಗಿದೆ.

■ ಪುರಂಜೀವಿ

## ಮಾತೇ ಮುತ್ತು

- ಧ್ಯಾನವು ಅನಂತ ಆನಂದಕ್ಕೆ ಇರುವ ಹೆಬ್ಬಾಗಿಲು.
  —ಸ್ವಾಮಿ ವಿವೇಕಾನಂದ
- ಯಾವುದನ್ನು ಆರಂಭಿಸಬೇಕಾದರೂ ಮೊದಲು ಭಂಡಾರ ಭದ್ರವಾಗಿರಬೇಕು.
  —ಅರ್ಥಶಾಸ್ತ್ರ
- ದೇವರು ನಮಗೆ ಬೇಕಾಗಿರುವುದು ನಮ್ಮ ಭದ್ರತೆಗಾಗಿ.
  —ರಬ್ಬಿ ಲಿಯೋನೆಲ್ ಬ್ಲೂ
- ನಮಗೆ ಸಿಗದೇ ಇರುವುದನ್ನು ದ್ವೇಷಿಸುವುದು ಬಹಳ ಸುಲಭ.
  —ಈಸೋಪ
- ನಿಜವಾದ ಯಶಸ್ಸು ಇರುವುದು ಕಾರ್ಯದಕ್ಷತೆಯಲ್ಲಿ.
  —ರಾಬರ್ಟ್ ಸ್ಟೀವನ್ ಸನ್
- ಸಿಹಿಯಲ್ಲಿ ಕಹಿ ಇದೆ, ಕೆಟ್ಟದ್ದರಲ್ಲಿ ಒಳ್ಳೆಯದಿದೆ.
  —ಎಮರ್‌ಸನ್
- ರಾಜಕೀಯವನ್ನೂ ನೀತಿಯನ್ನೂ ಬೇರೆ ಬೇರೆ ಎಂದು ಎಣಿಸಿದವರು ಎರಡನ್ನೂ ತಿಳಿದುಕೊಳ್ಳಲಾರರು.
  —ಜಿ.ವಿ. ಮಾರ್ಲೆ
- ನಾವಿರುವುದೇ ಪ್ರಯತ್ನಿಸಲು, ಸಾಹಸ ಮಾಡಲು, ಕಾಣಲು, ಸೋಲನ್ನೊಪ್ಪದೇ ಇರಲು.
  —ಲಾರ್ಡ್ ಟೆನಿಸನ್